# ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು-01.

ಸಂಖ್ಯೆ: ಇ(3)11353/2016-17/ಪಿಎಸ್‌ಸಿ ದಿನಾಂಕ:28-02-2017

## ಅಧಿಸೂಚನೆ

1. ಕರ್ನಾಟಕ ರಾಜ್ಯದ ಅಬಕಾರಿ ಇಲಾಖೆಯಲ್ಲಿನ ಅಬಕಾರಿ ಉಪನಿರೀಕ್ಷಕ ಮತ್ತು ಅಬಕಾರಿ ರಕ್ಷಕ (ಪುರುಷ) ಹಾಗೂ ಅಬಕಾರಿ ರಕ್ಷಕ (ಮಹಿಳೆ) ಖಾಲಿ ಇರುವ ಹುದ್ದೆಗಳನ್ನು, ಕರ್ನಾಟಕ ಅಬಕಾರಿ ಸೇವೆಗಳು (ನೇಮಕಾತಿ) ನಿಯಮಗಳು 1996 ಮತ್ತು ತಿದ್ದುಪಡಿ ನಿಯಮ 2009 ಮತ್ತು ಸರ್ಕಾರಿ ಆದೇಶ ಸಂಖ್ಯೆ: ಆಇ 87 ಇಪಿಎಸ್ 2016, ದಿನಾಂಕ: 07-11-2016ರ ಅನ್ವಯ ಭರ್ತಿಮಾಡಲು ON-LINE ಮೂಲಕ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

**ಅಬಕಾರಿ ಇಲಾಖೆಯಲ್ಲಿನ ಅಬಕಾರಿ ಉಪನಿರೀಕ್ಷಕರು ಮತ್ತು ರಕ್ಷಕರ ಭರ್ತಿ ಮಾಡಬೇಕಿರುವ ಹುದ್ದೆಗಳ ವಿವರಗಳು**

| ಕ್ರ. ಸಂ. | ಹುದ್ದೆಗಳ ವಿವರಗಳು | ಹುದ್ದೆಗಳ ಸಂಖ್ಯೆ | | |
|---|---|---|---|---|
| | | ಉಳಿದ ಮೂಲ ವೃಂದದ ಹುದ್ದೆಗಳು | ಹೈ.ಕ.ಪ್ರಾದೇಶಿಕ ವೃಂದದ ಹುದ್ದೆಗಳು | ಒಟ್ಟು ಹುದ್ದೆಗಳು |
| 01 | ಅಬಕಾರಿ ಉಪನಿರೀಕ್ಷಕರು | 145 | 32 | 177 |
| 02 | ಅಬಕಾರಿ ರಕ್ಷಕರು (ಪುರುಷ) | 945 | 07 | 952 |
| 03 | ಅಬಕಾರಿ ರಕ್ಷಕರು (ಮಹಿಳೆ) | 51 | - | 51 |

2. <u>ವೇತನ ಶ್ರೇಣಿ :-</u>

ಅ) <u>ಅಬಕಾರಿ ಉಪ ನಿರೀಕ್ಷಕರು:-</u>

₹ 16000-400-17200-450-1900-500-21000-600-24600-700-28800-800-29600

ಆ) <u>ಅಬಕಾರಿ ರಕ್ಷಕರು(ಪುರುಷ) ಮತ್ತು ಅಬಕಾರಿ ರಕ್ಷಕರು (ಮಹಿಳೆ):-</u>

₹ 11600-200-12000-250-13000-300-14200-350-15600-400-17200-450-19000-500-21000

<u>ಪಿಂಚಣಿ ಸೌಲಭ್ಯ:</u> ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ(ಎಸ್‌ಪಿಎಲ್) 04 ಪಿಇಟಿ 2005, ದಿನಾಂಕ: 31.03.2006ರಂತೆ.

**<u>ಸ್ಪರ್ಧಾತ್ಮಕ ಪರೀಕ್ಷೆಯ ದಿನಾಂಕ:</u>**

- * ಅಬಕಾರಿ ಉಪನಿರೀಕ್ಷಕರು : **30.04.2017**
- * ಅಬಕಾರಿ ರಕ್ಷಕರು (ಪುರುಷ) ಹಾಗೂ ಅಬಕಾರಿ ರಕ್ಷಕರು (ಮಹಿಳೆ) : **07.05.2017**

1) ಅರ್ಜಿಗಳನ್ನು ಆನ್-ಲೈನ್ (On-line) (ಎಲೆಕ್ಟ್ರಾನಿಕ್ ಮಾರ್ಗ) ಮುಖಾಂತರ ಮಾತ್ರ ಸಲ್ಲಿಸತಕ್ಕದ್ದು, ಅರ್ಜಿಗಳನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಪ್ರತ್ಯೇಕವಾಗಿ ಸಲ್ಲಿಸಲು ಅವಕಾಶವಿರುವುದಿಲ್ಲ.
2) ಸದರಿ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ "ONLINE" ಮೂಲಕ ಅರ್ಜಿ ಸಲ್ಲಿಸುವ ಎಲ್ಲಾ ಅಭ್ಯರ್ಥಿಗಳು ಅವರುಗಳ ಆಧಾರ್ ಕಾರ್ಡ್ ಸಂಖ್ಯೆಯನ್ನು ತಪ್ಪದೇ ಅರ್ಜಿಯಲ್ಲಿ ಭರ್ತಿ ಮಾಡತಕ್ಕದ್ದು, ಆಧಾರ್ ಕಾರ್ಡ್‌ನ್ನು ಮಾಡಿಸದೆ ಇರುವ ಅಭ್ಯರ್ಥಿಗಳು ಈ ಅಧಿಸೂಚನೆಯನ್ನು ಹೊರಡಿಸಿದ ತಕ್ಷಣ ಆಧಾರ್ ಕಾರ್ಡನ್ನು ಮಾಡಿಸಿ, ಅರ್ಜಿಯಲ್ಲಿ ತಪ್ಪದೇ ನಮೂದಿಸತಕ್ಕದ್ದು.

3. <u>ಪರೀಕ್ಷಾ ಶುಲ್ಕ:-</u>

| | |
|---|---|
| ಸಾಮಾನ್ಯ ಅರ್ಹತೆ, ಅಭ್ಯರ್ಥಿಗಳಿಗೆ | **ರೂ. 300/-** |
| ಪ್ರವರ್ಗ 2(ಎ), 2(ಬಿ), 3(ಎ), 3(ಬಿ) ಗೆ ಸೇರಿದ ಅಭ್ಯರ್ಥಿಗಳಿಗೆ | **ರೂ. 150/-** |
| ಮಾಜಿ ಸೈನಿಕ ಅಭ್ಯರ್ಥಿಗಳಿಗೆ | **ರೂ. 25/-** |
| ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1 ಅಭ್ಯರ್ಥಿಗಳಿಗೆ ಪರೀಕ್ಷಾ ಶುಲ್ಕದಿಂದ ವಿನಾಯಿತಿಯನ್ನು ನೀಡಲಾಗಿದೆ. | **ಪರೀಕ್ಷಾ ಶುಲ್ಕದಿಂದ ವಿನಾಯಿತಿ ನೀಡಲಾಗಿದೆ.** |

4. ಅರ್ಜಿಗಳನ್ನು **ON LINE** ಮೂಲಕ ಭರ್ತಿ ಮಾಡಿ **<u>ಪರೀಕ್ಷಾ ಶುಲ್ಕವನ್ನು ಅಂಚೆ ಕಛೇರಿಯ ಕೆಲಸದ ವೇಳೆಯೊಳಗೆ ಕರ್ನಾಟಕ ರಾಜ್ಯದ ಯಾವುದೇ ಎಲೆಕ್ಟ್ರಾನಿಕ್ ಅಂಚೆ ಕಛೇರಿಗಳಲ್ಲಿ (e-Payment Post Offices)</u>** ಪಾವತಿಸಲು ಅವಕಾಶ ಕಲ್ಪಿಸಿದ್ದು, ಈ ಸೌಲಭ್ಯದ ಜೊತೆಗೆ **<u>Credit Card /Debit Card /Net Banking ಮೂಲಕವೂ ಸಹ ಸಂದಾಯ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ</u>**

ಈ ಸೌಲಭ್ಯಗಳನ್ನು ಹೊರತುಪಡಿಸಿ, ಇತರೆ ಯಾವುದೇ ರೀತಿಯಲ್ಲಿ ಶುಲ್ಕ ಪಾವತಿಸಲು ಅವಕಾಶವಿರುವುದಿಲ್ಲ.

**5. ಅಭ್ಯರ್ಥಿಗಳು ON-LINE ಮೂಲಕ ಭರ್ತಿ ಮಾಡುವ ವಿಧಾನಗಳನ್ನು ಅನುಬಂಧ–'ಬಿ'ನಲ್ಲಿ ತೋರಿಸಲಾಗಿದೆ. ಅಭ್ಯರ್ಥಿಗಳು ಈ ಸೂಚನೆಗಳ ಪ್ರಿಂಟ್ ತೆಗೆದುಕೊಂಡು ಕಡ್ಡಾಯವಾಗಿ ಓದಿ, ಸ್ಪಷ್ಟವಾಗಿ ಅರ್ಥೈಸಿಕೊಂಡ ನಂತರವೇ ON-LINE ಮೂಲಕ ಅರ್ಜಿಯನ್ನು ಭರ್ತಿ ಮಾಡತಕ್ಕದ್ದು.**

**1) ಅಬಕಾರಿ ಉಪನಿರೀಕ್ಷಕರು ಹಾಗೂ ಅಬಕಾರಿ ರಕ್ಷಕರ ಹುದ್ದೆಗಳಲ್ಲಿ ಒಂದೇ ಹುದ್ದೆಗೆ ಅಥವಾ ಎರಡು ಹುದ್ದೆಗಳಿಗೆ ಅರ್ಜಿ ಸಲ್ಲಿಸಬಹುದು. ಎರಡೂ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅಪೇಕ್ಷಿಸಿದ್ದಲ್ಲಿ ಎರಡು ಹುದ್ದೆಗಳಿಗೂ ಸೇರಿಸಿ ಶುಲ್ಕ ಪಾವತಿಸತಕ್ಕದ್ದು.**

**2) ಒಮ್ಮೆ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂತಿರುಗಿಸಲಾಗುವುದಿಲ್ಲ ಅಥವಾ ಅದನ್ನು ಆಯೋಗವು ನಡೆಸುವ ಇತರೆ ಪರೀಕ್ಷೆ ಅಥವಾ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ. ಶುಲ್ಕವನ್ನು ಸಂದಾಯ ಮಾಡದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.**

**3) ತಪ್ಪು ಮಾಹಿತಿಗಳನ್ನು ನೀಡಿ ಅರ್ಜಿ ಸಲ್ಲಿಸಿದಲ್ಲಿ ಅಂತಹವರ ವಿರುದ್ಧ ಆಯೋಗವು ಕಾನೂನಿನನ್ವಯ ಸೂಕ್ತ ಕ್ರಮ ಕೈಗೊಳ್ಳುವುದು.**

5.1 **ನೇಮಕಾತಿ ಪ್ರಾಧಿಕಾರಿಗಳು ದೃಢೀಕರಿಸಿ ನೀಡಿರುವ ಹುದ್ದೆಗಳ ವರ್ಗೀಕರಣದ ಅನ್ವಯ ಅನುಬಂಧ–01, 02, 03 ಮತ್ತು 04 ರಲ್ಲಿ ತೋರಿಸಿದೆ.**

1. ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಪ್ರಾರಂಭಿಕ ದಿನಾಂಕ: **28.02.2017**
2. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **30.03.2017** ರ ರಾತ್ರಿ 11.45 ಗಂಟೆ.
3. ಪರೀಕ್ಷೆಯ ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ: **31.03.2017** ಅಂಚೆ ಕಛೇರಿಯ ಕಾರ್ಯದ ವೇಳೆಯೊಳಗೆ ಹಾಗೂ e-payment ಸಂದಾಯವನ್ನು ದಿನಾಂಕ: **31.03.2017** ರ ರಾತ್ರಿ 11.45 ರವರೆಗೆ ಮಾಡಲು ಅವಕಾಶವಿರುತ್ತದೆ.

5.2 ಅಭ್ಯರ್ಥಿಗಳು ಅರ್ಜಿಯಲ್ಲಿ ತಮ್ಮ ಮಿಂಚಂಚೆ (ಇ–ಮೇಲ್) ವಿಳಾಸವನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು. ಜೊತೆಗೆ ಮತ್ತೊಂದು ಪರ್ಯಾಯ ಮಿಂಚಂಚೆ (ಇ–ಮೇಲ್) ವಿಳಾಸವನ್ನು ಸಹ ಒದಗಿಸತಕ್ಕದ್ದು.

5.3 ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೂ ವಿಳಂಬ ಮಾಡದೆ ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

**6. ಅರ್ಹತಾ ಷರತ್ತುಗಳು:**

ಅ) ಭಾರತೀಯ ನಾಗರೀಕನಾಗಿರತಕ್ಕದು

ಆ) ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಪುರುಷ ಅಭ್ಯರ್ಥಿ ಮತ್ತು ಈಗಾಗಲೇ ಇನ್ನೊಬ್ಬ ಹೆಂಡತಿ ಇರುವ ವ್ಯಕ್ತಿಯನ್ನು ಮದುವೆಯಾಗಿರುವ ಮಹಿಳಾ ಅಭ್ಯರ್ಥಿಯು ಸರ್ಕಾರದಿಂದ ಪೂರ್ವಾನುಮತಿಯನ್ನು ಪಡೆಯದೇ ನೇಮಕಾತಿಗೆ ಅರ್ಹರಾಗುವುದಿಲ್ಲ.

ಇ) ಅಭ್ಯರ್ಥಿಗಳು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯು ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನತೆಯಿಂದ ಮುಕ್ತರಾಗಿರಬೇಕು.

ಈ) ವೈದ್ಯಕೀಯ ಮಂಡಳಿಯ ವರದಿಯ ಮೇಲೆ ದೈಹಿಕವಾಗಿ ಅನರ್ಹರೆಂಬುದಾಗಿ ತಿರಸ್ಕರಿಸುವ ಪೂರ್ಣ ವಿವೇಚನೆಯನ್ನು ರಾಜ್ಯ ಸರ್ಕಾರವು ಕಾಯ್ದಿರಿಸಿಕೊಂಡಿದೆ ಮತ್ತು ಸರ್ಕಾರದ ವಿವೇಚನೆಯು ಯಾವುದೇ ವಿಧದಲ್ಲೂ ಈ ಅಧಿಸೂಚನೆಯ ಮೂಲಕ ಸೀಮಿತವಾಗಿರುವುದಿಲ್ಲ.

- **ವಿಶೇಷ ಸೂಚನೆ:–**

(1) **ಪರೀಕ್ಷಾ ವೇಳಾಪಟ್ಟಿಯನ್ನು ಹಾಗೂ ಪರೀಕ್ಷಾ ಕೇಂದ್ರಗಳ ವಿವರಗಳನ್ನು ಆಯೋಗದ ಅಂತರ್ಜಾಲ** http://kpsc.kar.nic.in/timetable **ನಲ್ಲಿ ಪ್ರಕಟಿಸಲಾಗುವುದು.**

ಅಭ್ಯರ್ಥಿಗಳಿಗೆ ಪರೀಕ್ಷೆಯ ಪ್ರವೇಶ ಪತ್ರಗಳನ್ನು ದಿನಾಂಕ: 20.04.2017ರ ನಂತರ ಆಯೋಗದ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶವನ್ನು ಕಲ್ಪಿಸಿಕೊಡಲಾಗುವುದು. ಇದಲ್ಲದೆ ಇ–ಮೇಲ್ ಮೂಲಕ ಸಂದೇಶ ನೀಡಲಾಗುವುದು. **ಅಭ್ಯರ್ಥಿಗಳು ಕಡ್ಡಾಯವಾಗಿ ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಂಡು ಒಂದು ಮೂಲ ಗುರುತಿನ ಚೀಟಿಯೊಂದಿಗೆ (ಪ್ಯಾನ್ ಕಾರ್ಡ್/ಡ್ರೈವಿಂಗ್ ಲೈಸೆನ್ಸ್/ಆಧಾರ್ ಕಾರ್ಡ್/ ಪಾಸ್ಪೋರ್ಟ್/ವೋಟರ್ ಐಡಿ/ಸರ್ಕಾರಿ ನೌಕರರ ಐಡಿ) ಪರೀಕ್ಷಾ ಕೇಂದ್ರಗಳಿಗೆ ಹಾಜರಾಗಬೇಕು. ತಪ್ಪಿದ್ದಲ್ಲಿ ಪರೀಕ್ಷಾ ಕೇಂದ್ರವನ್ನು ಪ್ರವೇಶಿಸಲು ಅನುಮತಿಸಲಾಗುವುದಿಲ್ಲ.**

(2) ಅಭ್ಯರ್ಥಿಗಳು ಅರ್ಜಿಯಲ್ಲಿ ಕೋರುವ ಎಲ್ಲಾ ಮೀಸಲಾತಿ ಪ್ರಮಾಣ ಪತ್ರಗಳು ಚಾಲ್ತಿಯಲ್ಲಿರುವಂತೆ ಪಡೆದಿಟ್ಟುಕೊಳ್ಳತಕ್ಕದ್ದು. ಸದರಿ ಮೀಸಲಾತಿ ಪ್ರಮಾಣ ಪತ್ರಗಳನ್ನು ಸಿಂಧುವಾಗಿರತಕ್ಕದ್ದು (Valid) ಸದರಿ ಮೀಸಲಾತಿ ಪ್ರಮಾಣ ಪತ್ರಗಳನ್ನು ಅಧಿಸೂಚನೆಯ ಅನುಬಂಧ–5 ರಲ್ಲಿನ ನಮೂನೆಗಳಲ್ಲಿಯೇ ಪಡೆದಿಟ್ಟುಕೊಳ್ಳತಕ್ಕದ್ದು.

**7. ಶೈಕ್ಷಣಿಕ ವಿದ್ಯಾರ್ಹತೆ:-**

**ಅ) ಅಬಕಾರಿ ಉಪ ನಿರೀಕ್ಷಕರು**

ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕವಾದ **30.03.2017**ರಂದು ಯಾವುದೇ ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಪಡೆದ ಬ್ಯಾಚುಲರ್ ಪದವಿ ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿರಬೇಕು.

**ಆ) ಅಬಕಾರಿ ರಕ್ಷಕರು(ಪುರುಷ) ಮತ್ತು ಅಬಕಾರಿ ರಕ್ಷಕರು(ಮಹಿಳೆ)**

ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕವಾದ **30.03.2017**ರಂದು ವಿದ್ಯಾರ್ಹತೆಯನ್ನು ಅಭ್ಯರ್ಥಿಗಳು ಹೊಂದಿರಬೇಕು.

ಇ) ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ವಿದ್ಯಾರ್ಹತೆಯ ಪ್ರಮಾಣ ಪತ್ರ, ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ಉತ್ತೀರ್ಣರಾದ ನಂತರ ನೀಡಲಾಗುವ ವರ್ಗಾವಣೆ ಪ್ರಮಾಣ ಪತ್ರ (ಟಿ.ಸಿ)/ಕ್ಯುಮುಲೇಟಿವ್ ರೆಕಾರ್ಡ್‌ನಲ್ಲಿ ನಮೂದಿಸಿರುವಂತೆ ಜನ್ಮ ದಿನಾಂಕವನ್ನು ಆಯೋಗವು ಪರಿಗಣಿಸುವುದು.

**ಸೂಚನೆ:- ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಈ ಮೇಲಿನ ನಿಗದಿತ ವಿದ್ಯಾರ್ಹತೆಯ ಪರೀಕ್ಷೆ ಬರೆದು ಫಲಿತಾಂಶಕ್ಕಾಗಿ ಕಾಯುತ್ತಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುವುದಿಲ್ಲ.**

**8. ಹುದ್ದೆಗಳ ವರ್ಗೀಕರಣ:-**

**(ಅ) ಅಬಕಾರಿ ಉಪನಿರೀಕ್ಷಕರು-177 ಹುದ್ದೆಗಳು:**

ಈ ಹುದ್ದೆಗಳ ವರ್ಗೀಕರಣದ ವಿವರವನ್ನು ಅನುಬಂಧ-1ರಲ್ಲಿ ತೋರಿಸಿದೆ.

**(ಆ) ಅಬಕಾರಿ ರಕ್ಷಕರು (ಪುರುಷ) – 945 ಹುದ್ದೆಗಳು:**

ಈ ಹುದ್ದೆಗಳ ವರ್ಗೀಕರಣದ ವಿವರವನ್ನು ಅನುಬಂಧ-2ರಲ್ಲಿ ತೋರಿಸಿದೆ.

(ಇ) **ಹೈದರಾಬಾದ್-ಕರ್ನಾಟಕ – 07 ಹುದ್ದೆಗಳ** ವರ್ಗೀಕರಣದ ವಿವರವನ್ನು ಅನುಬಂಧ-3 ರಲ್ಲಿ ತೋರಿಸಲಾಗಿವೆ [ಅಬಕಾರಿ ರಕ್ಷಕರು (ಪುರುಷ)]

**(ಈ) ಅಬಕಾರಿ ರಕ್ಷಕರು (ಮಹಿಳೆ) – 51 ಹುದ್ದೆಗಳು:**

ಈ ಹುದ್ದೆಗಳ ವರ್ಗೀಕರಣದ ವಿವರವನ್ನು ಅನುಬಂಧ-4ರಲ್ಲಿ ತೋರಿಸಿದೆ.

**ಈ ಮೇಲಿನ ಹುದ್ದೆಗಳಿಗೆ ಕನಿಷ್ಠ ದೇಹದಾರ್ಢ್ಯತೆ ಮತ್ತು ದೈಹಿಕ ಅರ್ಹತಾ ಪರೀಕ್ಷೆಯನ್ನು ನಿಗದಿಪಡಿಸಿರುವುದರಿಂದ, ಈ ಹುದ್ದೆಗಳ ವರ್ಗೀಕರಣದಲ್ಲಿ ಅಂಗವಿಕಲರಿಗೆ ಹುದ್ದೆಗಳನ್ನು ಮೀಸಲಿರಿಸಿರುವುದಿಲ್ಲ. ಆದ್ದರಿಂದ ಅಂಗವಿಕಲ ಅಭ್ಯರ್ಥಿಗಳು ಈ ಹುದ್ದೆಗಳ ನೇಮಕಾತಿಗೆ ಅರ್ಹರಾಗುವುದಿಲ್ಲ.**

**9. ವಯೋಮಿತಿ: ಅರ್ಜಿಯನ್ನು ಸ್ವೀಕರಿಸಲು ನಿಗದಿ ಪಡಿಸಿದ ಕೊನೆಯ ದಿನಾಂಕ: 30.03.2017ರಂದು ಅಭ್ಯರ್ಥಿಯು ಈ ಕೆಳಕಂಡಂತೆ ಕನಿಷ್ಠ ವಯೋಮಿತಿ ಹೊಂದಿರತಕ್ಕದ್ದು ಮತ್ತು ಗರಿಷ್ಠ ವಯೋಮಿತಿ ಮೀರಿರಬಾರದು.**

| ಮೀಸಲಾತಿ | ಅಬಕಾರಿ ಉಪ ನಿರೀಕ್ಷಕರು | ಅಬಕಾರಿ ರಕ್ಷಕರು (ಪುರುಷ ಮತ್ತು ಮಹಿಳೆ) |
|---|---|---|
| | **ಕನಿಷ್ಠ 21 ವರ್ಷ ವಯೋಮಿತಿ** | **ಕನಿಷ್ಠ 18 ವರ್ಷ ವಯೋಮಿತಿ** |
| ಸಾಮಾನ್ಯ ವರ್ಗದ ಅಭ್ಯರ್ಥಿಗಳು | 26 ವರ್ಷಗಳು | 26 ವರ್ಷಗಳು |
| ಪ್ರವರ್ಗ-2(ಎ)/ಪ್ರವರ್ಗ 2(ಬಿ)/ ಪ್ರವರ್ಗ 3ಎ ಮತ್ತು ಪ್ರವರ್ಗ-3(ಬಿ) (ಹಿಂದುಳಿದ ವರ್ಗಗಳು) | 29 ವರ್ಷಗಳು | 29 ವರ್ಷಗಳು |
| ಪ್ರವರ್ಗ-I/ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ | 31 ವರ್ಷಗಳು | 31 ವರ್ಷಗಳು |
| **ಅರ್ಹ ಮಾಜಿ ಸೈನಿಕ ಅಭ್ಯರ್ಥಿಗಳು** * ಕಂಡಿಕೆ 9.1 ಅನ್ನು ಅವಲೋಕಿಸುವುದು. | ಮಾಜಿ ಸೈನಿಕ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿಯಲ್ಲಿ (ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿರುವ) ಅವರುಗಳು ಸೇವೆ ಸಲ್ಲಿಸಿರುವ ವರ್ಷಗಳ ಜೊತೆಗೆ 3 ವರ್ಷಗಳ ಸಡಿಲಿಕೆ ಅನ್ವಯವಾಗುತ್ತದೆ. | ಮಾಜಿ ಸೈನಿಕ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿಯಲ್ಲಿ (ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿರುವ) ಅವರುಗಳು ಸೇವೆ ಸಲ್ಲಿಸಿರುವ ವರ್ಷಗಳ ಜೊತೆಗೆ 3 ವರ್ಷಗಳ ಸಡಿಲಿಕೆ ಅನ್ವಯವಾಗುತ್ತದೆ. |

**9.1 ಮಾಜಿ ಸೈನಿಕರ ವಿವರಣೆ:–**

(ಎ) ಮಾಜಿ ಸೈನಿಕ ಎಂದರೆ ಸಶಸ್ತ್ರದಳಗಳಾದ ನಿಯಮಿತ ಭೂದಳ, ನೌಕಾದಳ ಮತ್ತು ವಾಯುದಳದಲ್ಲಿ ಯಾವುದೇ ಶ್ರೇಣಿಯಲ್ಲಿ (ಯೋಧ ಅಥವಾ ಅಯೋಧನಾಗಿ) ಸೇವೆ ಸಲ್ಲಿಸಿದ ವ್ಯಕ್ತಿ, ಅಂದರೆ ಡಿಫೆನ್ಸ್ ಸೆಕ್ಯುರಿಟಿಕೋರ್, ಜನರಲ್ ರಿಸರ್ವ್ ಇಂಜಿನೀಯರಿಂಗ್ ಫೋರ್ಸ್, ಲೋಕಸಹಾಯಕ ಸೇನಾ ಮತ್ತು ಪ್ಯಾರಾ ಮಿಲಿಟರಿ ದಳದಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿ ಸೇರ್ಪಡೆಯಾಗುವುದಿಲ್ಲ: ಮತ್ತು (ಬಿ) ಕೇಂದ್ರ ಸಶಸ್ತ್ರದಳಗಳಲ್ಲಿ ಸೇವೆ ಸಲ್ಲಿಸುವಾಗ ಕೊಲ್ಲಲ್ಪಟ್ಟ ಅಥವಾ ಶಾಶ್ವತವಾಗಿ ದೈಹಿಕ ವಿಕಲತೆ ಹೊಂದಿದ ವ್ಯಕ್ತಿಗಳ ಕುಟುಂಬದವರು ಮಾಜಿ ಸೈನಿಕ ಮೀಸಲಾತಿಗೆ ಅರ್ಹರಾಗಿರುತ್ತಾರೆ. ಆದರೆ ಅಂತಹವರುಗಳಿಗೆ ವಯೋಮಿತಿ ಸಡಿಲಿಕೆಯನ್ನು ನೀಡಲಾಗುವುದಿಲ್ಲ.

(ಅ) ಅಂತಹ ಸೇನೆಯಿಂದ ನಿವೃತ್ತಿ ಹೊಂದಿದ ನಂತರ ನಿವೃತ್ತಿ ವೇತನ ಪಡೆಯುತ್ತಿರುವ

**ಅಥವಾ**

(ಆ) ವೈದ್ಯಕೀಯ ಕಾರಣಗಳಿಂದ ಮಿಲಿಟರಿ ಸೇವೆಯಿಂದ ಬಿಡುಗಡೆಯಾದ ಅಥವಾ ವ್ಯಕ್ತಿಯಹಿಡಿತಕ್ಕೂ ಮೀರಿದ ಪರಿಸ್ಥಿತಿಗಳಿಂದ ಮತ್ತು ವೈದ್ಯಕೀಯ ಅಥವಾ ಅಸಾಮರ್ಥ್ಯದ ಪಿಂಚಣಿ ಪಡೆದು ಸೇವೆಯಲ್ಲಿ ಬಿಡುಗಡೆಯಾದವನು

**ಅಥವಾ**

(ಇ) ತನ್ನ ಸ್ವಂತ ಕೋರಿಕೆ ಮೇರೆಗೆ ಅಥವಾ ದುರ್ನಡತೆ ಅಥವಾ ಅಸಾಮರ್ಥ್ಯದ ಕಾರಣದಿಂದಾಗಿ ತೆಗೆದು ಹಾಕಿರುವ ಅಥವಾ ಕರ್ತವ್ಯದಿಂದ ವಜಾ ಮಾಡಿದ ವ್ಯಕ್ತಿಗಳನ್ನು ಹೊರತುಪಡಿಸಿ, ನಿರ್ದಿಷ್ಟ ಅವಧಿಯನ್ನು ಪೂರೈಸಿದ ತರುವಾಯ ಬಿಡುಗಡೆ ಹೊಂದಿದ ವ್ಯಕ್ತಿ ಮತ್ತು ಗ್ರಾಚ್ಯುಟಿ ಪಡೆಯುತ್ತಿರುವ ವ್ಯಕ್ತಿ ಮತ್ತು ಪ್ರಾಂತೀಯ ಸೇವೆಯ ಈ ಕೆಳಗೆ ಹೆಸರಿಸಿದ ವರ್ಗದ ಸಿಬ್ಬಂದಿಯವರು.

1. ನಿರಂತರ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಪಿಂಚಣಿದಾರರು
2. ಮಿಲಿಟರಿ ಸೇವೆಯಿಂದಾಗಿ ಉಂಟಾದ ದೈಹಿಕ ಅಸಾಮರ್ಥ್ಯತೆ ಹೊಂದಿ ಬಿಡುಗಡೆಯಾದ ವ್ಯಕ್ತಿ.
3. ಗ್ಯಾಲಂಟ್ರ ಪ್ರಶಸ್ತಿ ವಿಜೇತರು

**ವಿವರಣೆ:** ಕೇಂದ್ರ ಸಶಸ್ತ್ರದಳದ ಸೇವೆಯಲ್ಲಿ ವ್ಯಕ್ತಿಗಳು ಸೇವೆಯಿಂದ ನಿವೃತ್ತಿಹೊಂದಿದ ನಂತರ ಮಾಜಿ ಸೈನಿಕರ ವರ್ಗದಡಿ ಬರುವ ವ್ಯಕ್ತಿಗೆ ಒಪ್ಪಂದವು ಪೂರ್ಣವಾಗಲು ಒಂದು ವರ್ಷಕ್ಕೆ ಮುನ್ನ ಉದ್ಯೋಗಕ್ಕೆ ಅರ್ಜಿಹಾಕಿಕೊಳ್ಳಲು ಹಾಗೂ ಅವರಿಗೆ ಮಾಜಿಸೈನಿಕರಿಗೆ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಹೊಂದಲು ಅನುಮತಿ ನೀಡಲಾಗಿದೆ. ಆದರೆ, ಸಮವಸ್ತ್ರವನ್ನು ತ್ಯಜಿಸಲು ಅನುಮತಿ ನೀಡುವವರೆಗೆ ರಾಜ್ಯ ನಾಗರೀಕ ಸೇವೆ ಅಥವಾ ಹುದ್ದೆಗಳಿಗೆ ನೇಮಕ ಹೊಂದುವಂತಿಲ್ಲ.

**9.2 ಸೂಚನೆ:–** **ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳಿಗೆ ಈ ನೇಮಕಾತಿಯಲ್ಲಿ ವಯೋಮಿತಿ ಸಡಿಲಿಕೆ ಅನ್ವಯವಾಗುವುದಿಲ್ಲ ಆದಾಗ್ಯೂ ಅವರು ನಿಗದಿತ ವಯೋಮಿತಿಯಲ್ಲಿದ್ದಲ್ಲಿ ನೇಮಕಾತಿ ಪ್ರಾಧಿಕಾರದಿಂದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಪಡೆದಿಟ್ಟುಕೊಂಡು ಅರ್ಜಿ ಸಲ್ಲಿಸತಕ್ಕದ್ದು.**

**10. ಶಾರೀರಿಕ ದಾರ್ಢ್ಯತೆ:–**

**ಅಬಕಾರಿ ಉಪನಿರೀಕ್ಷಕರು, ಅಬಕಾರಿ ರಕ್ಷಕರು(ಪುರುಷ) ಮತ್ತು ಅಬಕಾರಿ ರಕ್ಷಕರು(ಮಹಿಳೆ).**

**(ಅ) ಶಾರೀರಿಕ ದಾರ್ಢ್ಯತೆಗೆ ಸಂಬಂಧಿಸಿದ ಷರತ್ತುಗಳು:–**

| | ಪುರುಷ ಅಭ್ಯರ್ಥಿಗಳಿಗೆ | ಮಹಿಳಾ ಅಭ್ಯರ್ಥಿಗಳಿಗೆ |
|---|---|---|
| (ಎ) ಎತ್ತರ | 163 ಸೆ. ಮೀ | 157 ಸೆ.ಮೀ. |
| (ಬಿ) ತೂಕ | -- | 49.9 ಕಿ.ಗ್ರಾಂ. |
| (ಸಿ) ಎದೆಯ ಅಳತೆ:– | ಎದೆಯ ಸುತ್ತಳತೆ 81 ಸೆ.ಮೀ.ಗಿಂತ ಕಡಿಮೆ ಇರಬಾರದು. ಪೂರ್ಣ ಉಸಿರು ಎಳೆದಾಗ 5 ಸೆ.ಮೀ.ಹೆಚ್ಚಳವಾಗಬೇಕು. | ಇದು ಮಹಿಳಾ ಅಭ್ಯರ್ಥಿಗಳಿಗೆ ಅನ್ವಯವಾಗುವುದಿಲ್ಲ. |

(ಆ) **ದೈಹಿಕ ಅರ್ಹತಾ ಪರೀಕ್ಷೆ:–**

**ಅಬಕಾರಿ ಉಪನಿರೀಕ್ಷಕರು/ಅಬಕಾರಿ ರಕ್ಷಕ (ಪುರುಷ)ರು ಮತ್ತು ಅಬಕಾರಿ ರಕ್ಷಕರು(ಮಹಿಳೆ) ಹುದ್ದೆಗಳ ಅಭ್ಯರ್ಥಿಗಳ ದೈಹಿಕ ಅರ್ಹತೆ, ದಾರ್ಢ್ಯತೆ ಮತ್ತು ಸಾಮರ್ಥ್ಯದ ಬಗ್ಗೆ ಈ ಕೆಳಕಂಡ ಪರೀಕ್ಷೆಗಳನ್ನು ನಡೆಸಲಾಗುವುದು.**

| ಕ್ರ.ಸಂ. | ಪುರುಷ | | | ಮಹಿಳೆ / ಮಾಜಿ ಸೈನಿಕ | |
|---|---|---|---|---|---|
| | ಅಂಶ (item) | ಅರ್ಹತಾ ಸಮಯ/ದೂರ | | ಅಂಶ (item) | ಅರ್ಹತಾ ಸಮಯ/ದೂರ |
| 1. | 100 ಮೀ. ಓಟ | 15 ಸೆಕೆಂಡುಗಳು | | 100 ಮೀ. ಓಟ | 18.05 ಸೆಕೆಂಡುಗಳು |
| 2. | ಎತ್ತರ ಜಿಗಿತ | 1.20 ಮೀಟರ್ | | ಎತ್ತರ ಜಿಗಿತ | 0.9 ಮೀಟರ್ |
| 3. | ಉದ್ದ ಜಿಗಿತ | 3.80 ಮೀಟರ್ | | ಉದ್ದ ಜಿಗಿತ | 2.50 ಮೀಟರ್ |
| 4. | ಗುಂಡಸೆತ(7.26 ಕೆ.ಜಿ) | 5.60 ಮೀಟರ್ | | ಗುಂಡೆಸೆತ (4 ಕೆ.ಜಿ) | 3.75 ಮೀಟರ್ |
| 5. | 800 ಮೀಟರ್ ಓಟ | 2 ನಿಮಿಷ 50 ಸೆಕೆಂಡುಗಳು | | 200 ಮೀಟರ್ ಓಟ | 40 ಸೆಕೆಂಡುಗಳು |

- ಅಭ್ಯರ್ಥಿಗಳು ಮೇಲಿನ 5 ದೈಹಿಕ ಸಾಮರ್ಥ್ಯಗಳ ಪೈಕಿ 3 ರಲ್ಲಿ ಉತ್ತೀರ್ಣರಾಗಬೇಕು.
- ದೈಹಿಕ ಸಾಮರ್ಥ್ಯ ಪರೀಕ್ಷೆಗೆ ಯಾವುದೇ ಅಂಕಗಳನ್ನು ನಿಗದಿಪಡಿಸಿರುವುದಿಲ್ಲ. ಇದು ಕೇವಲ ಅರ್ಹತಾದಾಯಕ ಪರೀಕ್ಷೆಯಾಗಿರುತ್ತದೆ.
- ಆಯೋಗವು ಈ ದೇಹದಾರ್ಢ್ಯತೆ ಮತ್ತು ದೈಹಿಕ ಸಾಮರ್ಥ್ಯ ಪರೀಕ್ಷೆಯನ್ನು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳಿಂದ ನೇತೃತ್ವಗೊಂಡ ಸಮಿತಿಯು ನಡೆಸುವುದು. ಈ ಸಮಿತಿಯಲ್ಲಿ ಜಿಲ್ಲೆಯ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿದ್ದು, ಜಿಲ್ಲಾ ಶಸ್ತ್ರ ಚಿಕಿತ್ಸಕರು ಮತ್ತು ಜಿಲ್ಲಾ ಯುವಜನ ಸೇವಾ ಅಧಿಕಾರಿಗಳು ಸದಸ್ಯರಾಗಿರುತ್ತಾರೆ ಹಾಗೂ ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು (ಅಬಕಾರಿ) ಸಮಿತಿಯ ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ.

(ಇ) **ದೃಷ್ಟಿ ಸಾಮರ್ಥ್ಯ:–**

| ದೂರದ ದೃಷ್ಟಿ | | ಹತ್ತಿರದ ದೃಷ್ಟಿ | |
|---|---|---|---|
| **ದೋಷ ರಹಿತ ದೃಷ್ಟಿ** | **ದೋಷಪೂರಿತ ದೃಷ್ಟಿ** | **ದೋಷ ರಹಿತ ದೃಷ್ಟಿ** | **ದೋಷಪೂರಿತ ದೃಷ್ಟಿ** |
| 6/6 | 6/9 | 0/6 | 0/8 |
| ಅಥವಾ | | | |
| 6/6 | 6/12 | | |

ಪ್ರತಿಯೊಂದು ಕಣ್ಣು ಸಂಪೂರ್ಣ ಕ್ಷೇತ್ರ ದೃಷ್ಟಿ ಹೊಂದಿರಬೇಕು. ವರ್ಣಾಂಧತೆ, ಮೆಳ್ಳೆಗಣ್ಣು ಅಥವಾ ಯಾವುದೇ ಕಣ್ಣಿನ ಅಥವಾ ರೆಪ್ಪೆಯ ವಿಕೃತ ಸ್ಥಿತಿಯನ್ನು ಅನರ್ಹತೆ ಎಂದು ಪರಿಗಣಿಸಲಾಗುವುದು.

## 11. ನೇಮಕಾತಿ ವಿಧಾನ:

ಕರ್ನಾಟಕ ಅಬಕಾರಿ ಸೇವೆಗಳು (ನೇಮಕಾತಿ) ನಿಯಮಗಳು 1996 ಮತ್ತು ಅದರ ತಿದ್ದುಪಡಿ ನಿಯಮಗಳು–2009ರವರೆಗಿನ (ತಿದ್ದುಪಡಿ) ನಿಯಮಗಳಲ್ಲಿ ಮತ್ತು ಸರ್ಕಾರಿ ಆದೇಶ ಸಂಖ್ಯೆ: ಅ ಇ 87 ಇಪಿಎಸ್ 2016 ದಿನಾಂಕ:07–11–2011 ರಲ್ಲಿ ನಿರ್ದಿಷ್ಟ ಪಡಿಸಿರುವಂತೆ ಅಬಕಾರಿ ಉಪ ನಿರೀಕ್ಷಕರ ಮತ್ತು ಅಬಕಾರಿ ರಕ್ಷಕರು (ಪುರುಷ) ಹಾಗೂ ಅಬಕಾರಿ ರಕ್ಷಕರು (ಮಹಿಳೆ) ಹುದ್ದೆಗಳಿಗೆ ಆಯೋಗವು ನಡೆಸಲಾಗುವ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿನ ಅಂಕಗಳ ಆಧಾರದ ಮೇಲೆ ಮೀಸಲಾತಿ ನಿಯಮಗಳನ್ವಯ ಪ್ರಕಟಿಸಲಾದ ಖಾಲಿ ಹುದ್ದೆಗಳ ಸಂಖ್ಯೆಗೆ ಅನುಗುಣವಾಗಿ 1:5ರ ಅನುಪಾತದಲ್ಲಿ ಅಭ್ಯರ್ಥಿಗಳನ್ನು ದೇಹ ದಾರ್ಢ್ಯತೆ ಮತ್ತು ದೈಹಿಕ ಸಾಮರ್ಥ್ಯದ ಪರೀಕ್ಷೆಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಗೆ ವಹಿಸಲಾಗುವುದು. ದೈಹಿಕ ಅರ್ಹತೆಗೆ ಸದರಿ ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ.

**ಅಬಕಾರಿ ಉಪ ನಿರೀಕ್ಷಕರ ಹುದ್ದೆಗಳ ಆಯ್ಕೆಪಟ್ಟಿ:** ದೈಹಿಕ ಸಾಮರ್ಥ್ಯದ ಅರ್ಹತಾ ಪರೀಕ್ಷೆಯಲ್ಲಿ ಅರ್ಹತೆ ಹೊಂದಿದ ಅಭ್ಯರ್ಥಿಗಳು, ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳು ಮತ್ತು ಚಾಲ್ತಿಯಲ್ಲಿರುವ ಮೀಸಲಾತಿಯ ನಿಯಮಗಳ ಆಧಾರದ ಮೇಲೆ ಆಯ್ಕೆಪಟ್ಟಿಯನ್ನು ಸಿದ್ಧಪಡಿಸಲಾಗುವುದು.

**ಅಬಕಾರಿ ರಕ್ಷಕರ ಹುದ್ದೆಗಳ ಆಯ್ಕೆಪಟ್ಟಿ:** ದೈಹಿಕ ಸಾಮರ್ಥ್ಯದ ಅರ್ಹತಾ ಪರೀಕ್ಷೆಯಲ್ಲಿ ಅರ್ಹತೆ ಹೊಂದಿದ ಅಭ್ಯರ್ಥಿಗಳು ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳು ಮತ್ತು ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳ ಆಧಾರದ ಮೇಲೆ ಆಯ್ಕೆಪಟ್ಟಿಯನ್ನು ಸಿದ್ಧಪಡಿಸಲಾಗುವುದು.

**ವಿಶೇಷ ಸೂಚನೆ: ಈ ಮೇಲ್ಕಂಡ ಹುದ್ದೆಗಳ ಆಯ್ಕೆಗೆ ಮೌಖಿಕ ಪರೀಕ್ಷೆ ಇರುವುದಿಲ್ಲ.**

**12. ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಕರ್ನಾಟಕದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ನಡೆಸಲಾಗುವುದು. ಅಭ್ಯರ್ಥಿಗಳು ಅರ್ಜಿಯಲ್ಲಿ ಅವರು ಸ್ಪರ್ಧಾತ್ಮಕ ಪರೀಕ್ಷೆ ತೆಗೆದುಕೊಳ್ಳಲು ಇಚ್ಛಿಸುವ ಕೇಂದ್ರವನ್ನು ನಮೂದಿಸತಕ್ಕದ್ದು. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳ ಸಂಖ್ಯೆಯನ್ನು ಆಧರಿಸಿ ಪರೀಕ್ಷಾ ಕೇಂದ್ರವನ್ನು ನಿಗದಿಪಡಿಸುವುದು ಆಯೋಗದ ವಿವೇಚನೆ ಆಗಿರುತ್ತದೆ.**

**13. ಸ್ಪರ್ಧಾತ್ಮಕ ಪರೀಕ್ಷೆ:–**

**(ಅ) ಅಬಕಾರಿ ಉಪ ನಿರೀಕ್ಷಕರು:–**

ಈ ಹುದ್ದೆಗಳ ನೇಮಕಾತಿಯನ್ನು ಕೆಳಕಂಡ ರೀತಿಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ನಡೆಸುವ ಮೂಲಕ ಮಾಡಲಾಗುವುದು. ಈ ಸ್ಪರ್ಧಾತ್ಮಕ ಪರೀಕ್ಷೆಯು ಪದವಿ ಮಟ್ಟದ್ದಾಗಿದ್ದು, ಎರಡು ಪತ್ರಿಕೆಗಳನ್ನು ಒಳಗೊಂಡಿರುತ್ತದೆ.

➡ **ಪತ್ರಿಕೆ–1:–** ಇದರಲ್ಲಿ ಎರಡು ಭಾಗಗಳಿರುತ್ತವೆ.

- **ಭಾಗ–1:–** ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಪ್ರಬಂಧ ಬರೆಯುವುದು. ಇದಕ್ಕೆ 30 ಅಂಕಗಳನ್ನು ನಿಗದಿಪಡಿಸಿರುತ್ತದೆ.
- **ಭಾಗ–2:–** ಕನ್ನಡದಿಂದ ಆಂಗ್ಲ ಭಾಷೆಗೆ ಮತ್ತು ಆಂಗ್ಲ ಭಾಷೆಯಿಂದ ಕನ್ನಡಕ್ಕೆ ಭಾಷಾಂತರಿಸುವುದು. ಇದಕ್ಕೆ 20 ಅಂಕಗಳನ್ನು ನಿಗದಿಪಡಿಸಿರುತ್ತದೆ.

ಒಟ್ಟು 50 ಅಂಕಗಳ ಈ ಪತ್ರಿಕೆಯು **1½** ಗಂಟೆಗಳ ಕಾಲಾವಧಿ ಆಗಿರುತ್ತದೆ.

➡ **ಪತ್ರಿಕೆ–2:–**

**ಸಾಮಾನ್ಯ ಅಧ್ಯಯನ:–** ಇದರಲ್ಲಿ ಸಾಮಾನ್ಯ ಜ್ಞಾನ, ವಿಜ್ಞಾನ, ಭೂಗೋಳ, ಇತಿಹಾಸ, ಸಂವಿಧಾನ, ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿ ಮತ್ತು ಸಾಮಾನ್ಯ ಮಾನಸಿಕ ಸಾಮರ್ಥ್ಯಗಳಿಗೆ ಸಂಬಂಧಿಸಿದ ಪ್ರಶ್ನೆಗಳಿದ್ದು, ಇದಕ್ಕೆ 150 ಅಂಕಗಳನ್ನು ನಿಗದಿಪಡಿಸಿರುತ್ತದೆ. ಈ ಪತ್ರಿಕೆಯು "ವಸ್ತುನಿಷ್ಠ ಬಹು ಆಯ್ಕೆ" (Objective Multiple Choice type) ಮಾದರಿಯದಾಗಿದ್ದು, ಒಟ್ಟು ಒಂದೂವರೆ ಗಂಟೆ ಅವಧಿಯದಾಗಿರುತ್ತದೆ. ಯಾವುದೇ ಪತ್ರಿಕೆಗೆ ಕನಿಷ್ಠ ಅರ್ಹತಾ ಅಂಕಗಳನ್ನು ನಿಗದಿಪಡಿಸಿರುವುದಿಲ್ಲ. ಎರಡು ಪತ್ರಿಕೆಗಳಲ್ಲಿ ಅಭ್ಯರ್ಥಿಗಳು ಗಳಿಸಿದ ಅಂಕಗಳನ್ನು ಆಧರಿಸಿ ಅರ್ಹತಾ ಪಟ್ಟಿಯನ್ನು ಸಿದ್ಧಪಡಿಸಲಾಗುವುದು.

**(ಆ) ಅಬಕಾರಿ ರಕ್ಷಕರು(ಪುರುಷ) ಮತ್ತು ಅಬಕಾರಿ ರಕ್ಷಕರು(ಮಹಿಳೆ):–**

➡ **ಸ್ಪರ್ಧಾತ್ಮಕ ಪರೀಕ್ಷೆ:–**

ಕರ್ನಾಟಕ ನಾಗರೀಕ ಸೇವೆಗಳು (ಲಿಪಿಕ ಹುದ್ದೆಗಳ ನೇಮಕಾತಿ) ನಿಯಮಗಳು 1978ರ ಮತ್ತು ತಿದ್ದುಪಡಿ ಅಧಿಸೂಚನೆ ಗಳನ್ವಯ ನಡೆಸುವ ಈ ಪರೀಕ್ಷೆಯು ವಸ್ತುನಿಷ್ಠ ಬಹು ಆಯ್ಕೆ ಮಾದರಿಯ ಪತ್ರಿಕೆಗಳನ್ನು ಹೊಂದಿರುತ್ತದೆ.

- **ಪ್ರಶ್ನೆ ಪತ್ರಿಕೆ– 1: ಸಾಮಾನ್ಯ ಜ್ಞಾನ : 150 ಅಂಕಗಳು– 2 ಗಂಟೆಗಳ ಅವಧಿ**
- **ಪ್ರಶ್ನೆ ಪತ್ರಿಕೆ– 2: ಸಾಮಾನ್ಯ ಕನ್ನಡ ಅಥವಾ ಸಾಮಾನ್ಯ ಇಂಗ್ಲೀಷ್: 150 ಅಂಕಗಳು– 2 ಗಂಟೆಗಳ ಅವಧಿ**

ಪ್ರತಿಯೊಂದು ಪತ್ರಿಕೆಯ ಗರಿಷ್ಠ ಅಂಕಗಳು 150 ಆಗಿರುತ್ತದೆ ಮತ್ತು ಪ್ರತಿಯೊಂದು ಪತ್ರಿಕೆಯನ್ನು 2 ಘಂಟೆ ಸಮಯದಲ್ಲಿ ಉತ್ತರಿಸಬೇಕಾಗುತ್ತದೆ. ಈ ಎರಡು ಪತ್ರಿಕೆಗಳು "ವಸ್ತುನಿಷ್ಠ ಬಹು ಆಯ್ಕೆಯ" (Objective Multiple Choice Type) ವಿಧಾನದ್ದಾಗಿರುವುದು.

➡ **ಈ ಪತ್ರಿಕೆಗಳ ಪಠ್ಯಕ್ರಮ:–**

- ಸಾಮಾನ್ಯ ಜ್ಞಾನ ಪತ್ರಿಕೆಯು ಸಾಮಾನ್ಯವಾಗಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ಇರಬೇಕಾದ ಸಾಮಾನ್ಯ ಜ್ಞಾನಕ್ಕೆ ಸಂಬಂಧಪಟ್ಟ ಕನಿಷ್ಠ ವಿದ್ಯಾಮಟ್ಟಕ್ಕೆ ಸಮನಾಗಿರುವುದು ಮತ್ತು ಇದು ಭಾರತದ ಸಂವಿಧಾನ, ಭಾರತದ ಇತಿಹಾಸ ಮತ್ತು ಸಂಸ್ಕೃತಿ, ಸಾಮಾನ್ಯ ಅರ್ಥಶಾಸ್ತ್ರ, ಭೂಗೋಳ ಶಾಸ್ತ್ರ, ಇತ್ತೀಚಿನ ಘಟನೆಗಳು, ದೈನಿಕ ಜೀವನದಲ್ಲಿ ವಿಜ್ಞಾನ ಮತ್ತು ಒಬ್ಬ ವಿದ್ಯಾವಂತ ವ್ಯಕ್ತಿಯು ದೈನಂದಿನ ಜೀವನದಲ್ಲಿ ಗಮನಿಸಬಹುದಾದಂತಹ ವಿಷಯಗಳು ಇವುಗಳ ಮೇಲಿನ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.
- ಸಾಮಾನ್ಯ ಕನ್ನಡ ಅಥವಾ ಸಾಮಾನ್ಯ ಇಂಗ್ಲೀಷಿನ ಪತ್ರಿಕೆಯು ಸಾಮಾನ್ಯವಾಗಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣನಾಗಿರುವ ವಿದ್ಯಾರ್ಥಿಗೆ ಇರಬೇಕಾದ ಕನಿಷ್ಠ ವಿದ್ಯಾಮಟ್ಟಕ್ಕೆ ಸಮನಾಗಿರುವುದು. ಇದರ ಮೂಲಕ ಅಭ್ಯರ್ಥಿಯ

ಕನ್ನಡ ಮತ್ತು ಇಂಗ್ಲೀಷ್ ವ್ಯಾಕರಣ ಶಬ್ದ ಸಂಪತ್ತು, ಕಾಗುಣಿತ (Spelling) ಸಮನಾರ್ಥಕ ಪದಗಳು, ವಿರುದ್ಧಾರ್ಥಕ ಪದಗಳು ಇವುಗಳ ಪರಿಜ್ಞಾನ, ಇಂಗ್ಲೀಷ್/ಕನ್ನಡ ಭಾಷೆಯನ್ನು ಅರಿಯುವ ಮತ್ತು ಗ್ರಹಿಸುವ ಅಭ್ಯರ್ಥಿಯ ಶಕ್ತಿಯ ಮತ್ತು ಅದರ ಸರಿಯಾದ ಹಾಗೂ ತಪ್ಪು ಬಳಕೆ ಇತ್ಯಾದಿಗಳನ್ನು ಪರಿಶೀಲಿಸುವ ಅಭ್ಯರ್ಥಿಯ ಸಾಮರ್ಥ್ಯ ಇವುಗಳನ್ನು ಪರೀಕ್ಷಿಸಲು ಉದ್ದೇಶಿಸಲಾಗಿದೆ. ಅಭ್ಯರ್ಥಿಗಳು ಸಾಮಾನ್ಯ ಕನ್ನಡ ಅಥವಾ ಸಾಮಾನ್ಯ ಇಂಗ್ಲೀಷ್ ಪತ್ರಿಕೆಗಳಲ್ಲಿ ಯಾವುದಾದರೂ ಒಂದಕ್ಕೆ ಉತ್ತರಿಸಬಹುದು.

**ಪ್ರಮುಖ ಸೂಚನೆಗಳು:**

**14. ಮೀಸಲಾತಿ ಪ್ರಮಾಣ ಪತ್ರಗಳು:**

ಜಾತಿ ಮೀಸಲಾತಿ ಕೋರಬಯಸುವ

- ಪ.ಜಾ/ಪ.ಪಂ. ಅಭ್ಯರ್ಥಿಗಳು ನಮೂನೆ 'ಡಿ' ರಲ್ಲಿ
- ಪ್ರವರ್ಗ–1ರ ಅಭ್ಯರ್ಥಿಗಳು ನಮೂನೆ 'ಇ' ನಲ್ಲಿ ಹಾಗೂ
- 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳು ನಮೂನೆ 'ಎಫ್' ನಲ್ಲಿ ಸಂಬಂಧಿತ ತಹಶೀಲ್ದಾರರವರಿಂದ ಪ್ರಮಾಣ ಪತ್ರವನ್ನು ಪಡೆದಿರಬೇಕು. ಈ ಹುದ್ದೆಗಳಿಗಾಗಿ ಆಯ್ಕೆ ಹೊಂದುವ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಜಾತಿ ಮೀಸಲಾತಿ ಪ್ರಮಾಣ ಪತ್ರಗಳನ್ನು ಆಯಾ ನೇಮಕಾತಿ ಪ್ರಾಧಿಕಾರದವರು ಅವುಗಳ ಸಿಂಧುತ್ವದ ಪರಿಶೀಲನೆಗೆ ಒಳಪಟ್ಟಂತೆ ನೇಮಕಾತಿಗೆ ಬದ್ದರಾಗಿರುತ್ತಾರೆ. ಈ ಪ್ರಮಾಣ ಪತ್ರಗಳ ನಮೂನೆಗಳನ್ನು ಅಧಿಸೂಚನೆಯ ಕೊನೆಯಲ್ಲಿ ನೀಡಲಾಗಿರುತ್ತದೆ. (ಅನುಬಂಧ–5)

**15. ಗ್ರಾಮೀಣ ಅಭ್ಯರ್ಥಿ:**

- ಗ್ರಾಮೀಣ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಗಳ ರೀತ್ಯಾ ಗ್ರಾಮೀಣ ಮೀಸಲಾತಿಗೆ ಒಳಪಡುವ ಪ್ರದೇಶಗಳಲ್ಲಿ 1 ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡಿ ಉತ್ತೀರ್ಣರಾಗಿರುವವರು ಈ ಮೀಸಲಾತಿಯನ್ನು ಪಡೆಯಲು ಅರ್ಹರು.
- ಗ್ರಾಮೀಣ ಮೀಸಲಾತಿಯನ್ನು ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1, 2ಎ, 2ಬಿ, 3ಎ, 3ಬಿ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳು ನಮೂನೆ 2 ರಲ್ಲಿ ಸಿಂಧುವಾಗಿರುವ (Valid) ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು.
- ಗ್ರಾಮೀಣ ಮೀಸಲಾತಿ ಕೋರುವ ಸಾಮಾನ್ಯ ವರ್ಗದ ಅಭ್ಯರ್ಥಿಗಳು ನಮೂನೆ–2 ರ ಮೀಸಲಾತಿ ಪ್ರಮಾಣ ಪತ್ರದ ಜೊತೆಗೆ ನಮೂನೆ–1 ರಲ್ಲಿ ಅವರು ಮೇಲುಪದರಕ್ಕೆ(creamylayer) ಸೇರಿಲ್ಲದಿರುವ ಬಗ್ಗೆ ಪ್ರಮಾಣ ಪತ್ರವನ್ನು ಸಂಬಂಧಿಸಿದ ತಹಶೀಲ್ದಾರ್‌ರವರಿಂದ ಪಡೆದು ಹೊಂದಿರತಕ್ಕದ್ದು.

**ಸೂಚನೆ:** ಗ್ರಾಮೀಣ ಮೀಸಲಾತಿಗೆ ಸಂಬಂಧಿಸಿದಂತೆ ನಮೂನೆ–2ರ ಪ್ರಮಾಣ ಪತ್ರವನ್ನು ಅಭ್ಯರ್ಥಿಗಳು ತಾವು ವ್ಯಾಸಂಗ ಮಾಡಿದ ಶಾಲೆಯ ಮುಖ್ಯೋಪಾಧ್ಯಾಯರಿಂದ ಪಡೆದು ಅದಕ್ಕೆ ಸಂಬಂಧಿತ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ರುಜು ಪಡೆದಿರತಕ್ಕದ್ದು.

**15.1 ಕನ್ನಡ ಮಾಧ್ಯಮ ಅಭ್ಯರ್ಥಿ :**

ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳಿಗೆ ಮೀಸಲಿರಿಸಿದ ಹುದ್ದೆಗಳ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು 1ನೇ ತರಗತಿಯಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಸಂಬಂಧ ಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ ಮತ್ತು ಮೊಹರಿನೊಂದಿಗೆ ಪ್ರಮಾಣ ಪತ್ರವನ್ನು ಪಡೆದಿರಬೇಕು.

**15.2 ಯೋಜನಾ ನಿರಾಶ್ರಿತ ಅಭ್ಯರ್ಥಿ :**

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 23 ಸೆನೆನಿ 99, ದಿನಾಂಕ: 23–11–2000ರನ್ವಯ ಯೋಜನೆಗಳಿಂದ ನಿರ್ವಸಿತರಾದ (ಈ ನಿಯಮಗಳು ಜಾರಿಯಾಗುವ 20 ವರ್ಷಕ್ಕೆ ಮುನ್ನ ನಿರ್ವಸತಿತರಾದ ಕುಟುಂಬದ ಅಭ್ಯರ್ಥಿಗಳು ಈ ಮೀಸಲಾತಿಗೆ ಅನ್ವಯವಾಗುವುದಿಲ್ಲ) ಕುಟುಂಬದ ಅಭ್ಯರ್ಥಿಗಳಿಗೆ ಮೀಸಲಿರಿಸಿದ ಹುದ್ದೆಗಳನ್ನು ಕೋರುವ ಅಭ್ಯರ್ಥಿಗಳು ಸಂಬಂಧಿಸಿದ ತಹಶೀಲ್ದಾರ್ ರವರಿಂದ ನಿಗದಿತ ನಮೂನೆಯಲ್ಲಿ ಪ್ರಮಾಣ ಪತ್ರವನ್ನು ಪಡೆದಿರತಕ್ಕದ್ದು.

**15.3 ಅನುಚ್ಛೇಧ 371(ಜೆ)ರಂತೆ ಹೈದರಾಬಾದ್ –ಕರ್ನಾಟಕ ಪ್ರದೇಶಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮೀಸಲಾತಿ :**

ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಅರ್ಹತಾ ಪ್ರಮಾಣ ಪತ್ರಗಳ ನೀಡಿಕೆ) ನಿಯಮಗಳು 2013ಕ್ಕೆ ಸಂಬಂಧಿಸಿದಂತೆ ನೇರ ನೇಮಕಾತಿಯಲ್ಲಿ ಸ್ಥಳೀಯ ವ್ಯಕ್ತಿಯೆಂಬ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು **ಅನುಬಂಧ–'ಎ'ರಲ್ಲಿ** ಸೂಚಿಸಿರುವ ನಮೂನೆಯಲ್ಲಿಯೇ ಅರ್ಹತಾ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರವಾದ ಸಂಬಂಧಪಟ್ಟ ಉಪ ವಿಭಾಗದ ಸಹಾಯಕ ಆಯುಕ್ತರಿಂದ **ಸಹಿ, ಮೊಹರು ಮತ್ತು ಜಾರಿ ಮಾಡಿದ ದಿನಾಂಕದೊಂದಿಗೆ ಪಡೆದಿಟ್ಟುಕೊಂಡಿರತಕ್ಕದ್ದು.** ಈ ಪ್ರಮಾಣ ಪತ್ರದ ನಮೂನೆಯನ್ನು **ಅನುಬಂಧ–03ರಡಿಯಲ್ಲಿ** ಅರ್ಹತಾ ಪ್ರಮಾಣ ಪತ್ರವನ್ನು ತೋರಿಸಲಾಗಿದೆ. **ಈ ನಮೂನೆಯನ್ನು ಹೊರತುಪಡಿಸಿ ಇತರೆ ಯಾವುದೇ ನಮೂನೆಯಲ್ಲಿ ಪಡೆಯಲಾದ ಅರ್ಹತಾ ಪ್ರಮಾಣ ಪತ್ರವನ್ನು ತಿರಸ್ಕರಿಸಲಾಗುವುದು.**

**15.4 ಹೈದರಾಬಾದ್–ಕರ್ನಾಟಕ ಮೀಸಲಾತಿ ಕೋರುವ ಸರ್ಕಾರಿ ನೌಕರರು, ಈ ಮೀಸಲಾತಿ ಕೋರುವ ಅಭ್ಯರ್ಥಿಗಳು ಅರ್ಹತಾ ಪ್ರಮಾಣ ಪತ್ರದ ಜೊತೆಗೆ ಸ್ವ–ಗ್ರಾಮ ಪ್ರಮಾಣ ಪತ್ರವನ್ನು, ಹೈದರಾಬಾದ್–ಕರ್ನಾಟಕ ಉಪ ನಿಯಮ 5(2) ರಂತೆ ನೇಮಕಾತಿ ಪ್ರಾಧಿಕಾರಿಗಳಿಂದ ನಿರಾಪೇಕ್ಷಣಾ (NOC)ಪತ್ರವನ್ನು ಪಡೆದಿಟ್ಟುಕೊಂಡು, ಆಯೋಗವು ಅಪೇಕ್ಷಿಸಿದಲ್ಲಿ ಸಲ್ಲಿಸತಕ್ಕದ್ದು.**

1) **ದಿನಾಂಕ30.03.2017ರ ಒಳಗೆ ಅಭ್ಯರ್ಥಿಯು ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು ಹಾಗೂ ನಿಗದಿತ ವಯೋಮಿತಿಯಲ್ಲಿರತಕ್ಕದ್ದು .**
2) **ವಿವಿಧ ಮೀಸಲಾತಿ ಕೋರಿ ಹಾಜರು ಪಡಿಸಬೇಕಾದ ಪ್ರಮಾಣ ಪತ್ರಗಳನ್ನು ಹಾಜರು ಪಡಿಸದಿದ್ದಲ್ಲಿ: ಆ ಮೀಸಲಾತಿಯನ್ನು ರದ್ದು ಪಡಿಸಿ, ಸಾಮಾನ್ಯ ಅರ್ಹತೆಯಲ್ಲಿ ಅರ್ಹತೆಯನ್ನು ಹೊಂದಿದ್ದಲ್ಲಿ ಮಾತ್ರ, ಸಾಮಾನ್ಯ ಅರ್ಹತೆಯ ಅಭ್ಯರ್ಥಿಯೆಂದು ಪರಿಗಣಿಸಲಾಗುವುದು, ಇಲ್ಲವಾದಲ್ಲಿ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.**

**16. ಅರ್ಜಿಯಲ್ಲಿ ಮೀಸಲಾತಿಗೆ ಸಂಬಂಧಿಸಿದ ಅಂಕಣದಲ್ಲಿ ಉಪಯೋಗಿಸಿದ ಪದಗಳ ಅರ್ಥವನ್ನು ಈ ಕೆಳಕಂಡಂತೆ ಅರ್ಥೈಸಿಕೊಳ್ಳಬೇಕು:–**

| | | | |
|---|---|---|---|
| ಸಾ.ಅ | ಸಾಮಾನ್ಯ ಅರ್ಹತೆ | GM | General Merit |
| ಪ.ಜಾ | ಪರಿಶಿಷ್ಟ ಜಾತಿ | SC | Scheduled Caste |
| ಪ.ಪಂ | ಪರಿಶಿಷ್ಟ ಪಂಗಡ | ST | Scheduled Tribe |
| ಪ್ರ–1 | ಪ್ರವರ್ಗ–1 | Cat – 1 | Category – I |
| 2ಎ | ಪ್ರವರ್ಗ–2ಎ | 2A | Category – 2A |
| 2ಬಿ | ಪ್ರವರ್ಗ–2ಬಿ | 2B | Category – 2B |
| 3ಎ | ಪ್ರವರ್ಗ–3ಎ | 3A | Category – 3A |
| 3ಬಿ | ಪ್ರವರ್ಗ–3ಬಿ | 3B | Category – 3B |
| ಮಾ.ಸೈ | ಮಾಜಿ ಸೈನಿಕ | Ex-MP | Ex-Military Person |
| ಗ್ರಾಮೀಣ | ಗ್ರಾಮೀಣ ಅಭ್ಯರ್ಥಿ | Rural | Rural Reservation |
| ಕ.ಮಾ.ಅ | ಕನ್ನಡ ಮಾಧ್ಯಮ ಅಭ್ಯರ್ಥಿ | KMS | Kannada Medium Student |
| ಯೋ.ಅ | ಯೋಜನಾ ನಿರಾಶ್ರಿತ ಅಭ್ಯರ್ಥಿ | PDP | Project Displaced Person |
| ಹೈ.ಕ | ಹೈದರಾಬಾದ್–ಕರ್ನಾಟಕ | H.K | Hydarabad - Karnataka |

**16.1** ಅಭ್ಯರ್ಥಿಗಳು ತಮ್ಮ ON LINE ಅರ್ಜಿಗಳಲ್ಲಿ ನೀಡುವ ಮಾಹಿತಿಗಳ ಆಧಾರದ ಮೇಲೆ ಅವರುಗಳು ಸ್ಪರ್ಧಾತ್ಮಕ ಪರೀಕ್ಷೆಯನ್ನು ಬರೆಯಲು ಅರ್ಹರೆ ಎಂಬುದನ್ನು ಆಯೋಗವು ಪರಿಶೀಲಿಸಿ ಅರ್ಹರೆಂದು ಕಂಡುಬಂದ ಅಭ್ಯರ್ಥಿಗಳನ್ನು ಸ್ಪರ್ಧಾತ್ಮಕ ಪರೀಕ್ಷೆಗೆ ಪರಿಗಣಿಸಲಾಗುವುದು. ಆದ್ದರಿಂದ ನಿಗದಿಪಡಿಸಿರುವ ವಯೋಮಿತಿ, ವಿದ್ಯಾರ್ಹತೆ, ಮೀಸಲಾತಿ ಇತ್ಯಾದಿಗಳಿಗೆ ಅನುಗುಣವಾಗಿ ಅರ್ಜಿಯಲ್ಲಿ ನಿಖರವಾದ ಮಾಹಿತಿ ನೀಡುವುದು ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ.

**16.2** ಅ) ಅಭ್ಯರ್ಥಿಗಳು ತಮ್ಮ ಮಾಹಿತಿಗಾಗಿ ಭರ್ತಿ ಮಾಡಿ ಸಲ್ಲಿಸಿದ ಅರ್ಜಿಯ ಒಂದು ಪ್ರತಿಯನ್ನು ಕಡ್ಡಾಯವಾಗಿ ತಮ್ಮೊಂದಿಗೆ ಇಟ್ಟುಕೊಳ್ಳಲು ಸೂಚಿಸಿದೆ.

ಆ) ನೇಮಕಾತಿ ಪ್ರಕ್ರಿಯೆಯ ಯಾವುದೇ ಹಂತದಲ್ಲಿ ವಿಳಾಸ ಬದಲಾವಣೆಯಾಗಿದ್ದಲ್ಲಿ ಅಭ್ಯರ್ಥಿಗಳು ಲಿಖಿತ ಮೂಲಕ ಆಯೋಗದ ಗಮನಕ್ಕೆ ತರತಕ್ಕದ್ದು. ಈ ವಿಳಾಸ ಬದಲಾವಣೆಯನ್ನು ಪರಿಗಣಿಸಲು ಆಯೋಗವು ಪ್ರಯತ್ನಿಸುವುದು. ಆದಾಗ್ಯೂ ಈ ವಿಚಾರದಲ್ಲಿ ಆಯೋಗವು ಯಾವುದೇ ಜವಾಬ್ದಾರಿಯನ್ನು ವಹಿಸಿಕೊಳ್ಳುವುದಿಲ್ಲ.

17. <u>ಪ್ರವೇಶ ಪತ್ರ:</u>

<u>ಆಯೋಗವು ಅಭ್ಯರ್ಥಿಗಳಿಗೆ ಪ್ರವೇಶ ಪತ್ರಗಳನ್ನು ಕಳುಹಿಸುವುದಿಲ್ಲ. ಅಭ್ಯರ್ಥಿಗಳು ಸ್ವತಃ ಆಯೋಗದ ವೆಬ್‌ಸೈಟಿನಿಂದ ಪ್ರವೇಶ ಪತ್ರಗಳನ್ನು Down Load ಮಾಡಿಕೊಂಡು ಪರೀಕ್ಷೆಗೆ ಹಾಜರಾಗತಕ್ಕದ್ದು.</u>

17.1 ಸ್ಪರ್ಧಾತ್ಮಕ ಪರೀಕ್ಷೆಯನ್ನು ಬರೆಯುವ ಅಭ್ಯರ್ಥಿಗಳಿಗೆ ಪರೀಕ್ಷಾ ಸೂಚನೆಗಳು:-

1. ಈ ಪ್ರವೇಶ ಪತ್ರವನ್ನು ಹಾಜರುಪಡಿಸದಿದ್ದಲ್ಲಿ ಪರೀಕ್ಷಾ ಕೇಂದ್ರವನ್ನು ಪ್ರವೇಶಿಸಲು ಅನುಮತಿಸಲಾಗುವುದಿಲ್ಲ. ಅಭ್ಯರ್ಥಿಯು ತನಗೆ ಹಂಚಿಕೆ ಮಾಡಿದ ಪರೀಕ್ಷಾ ಉಪಕೇಂದ್ರ/ಸ್ಥಳದಲ್ಲಿಯೇ ಪರೀಕ್ಷೆಗೆ ಹಾಜರಾಗಬೇಕು.
2. ಈ ಪ್ರವೇಶ ಪತ್ರವನ್ನು ಪಡೆದುಕೊಂಡ ಕೂಡಲೇ ಪರೀಕ್ಷಾ ಕೇಂದ್ರದ ವಿಳಾಸವನ್ನು ಪರಿಶೀಲಿಸಿಕೊಳ್ಳುವುದು. ಪ್ರವೇಶ ಪತ್ರದಲ್ಲಿ ಭಾವಚಿತ್ರವು ಸ್ಪಷ್ಟವಾಗಿಲ್ಲದಿದ್ದಲ್ಲಿ ಅಥವಾ ಮುದ್ರಿತವಾಗದಿದ್ದಲ್ಲಿ ಅಂತಹ ಅಭ್ಯರ್ಥಿಯು ಪರೀಕ್ಷಾ ದಿನದಂದು ಪ್ರವೇಶ ಪತ್ರದೊಂದಿಗೆ ಪಾಸ್‌ಪೋರ್ಟ್/ಸ್ಟ್ಯಾಂಪ್ ಅಳತೆಯ ಭಾವಚಿತ್ರವನ್ನು ಸಂವೀಕ್ಷಕರಿಗೆ ನೀಡಿ ನಾಮಿನಲ್ ರೋಲ್‌ನಲ್ಲಿನ ನಿಗದಿತ ಅಂಕಣದಲ್ಲಿ ಅಂಟಿಸಿ ದೃಢೀಕರಿಸುವಂತೆ ತಿಳಿಸುವುದು.
3. ಪರೀಕ್ಷಾ ಪ್ರಾರಂಭಕ್ಕೆ 20 ನಿಮಿಷ ಮುಂಚಿತವಾಗಿ ಅಭ್ಯರ್ಥಿಯು ಪರೀಕ್ಷಾ ಕೇಂದ್ರದೊಳಗೆ ಹಾಜರಾಗಬೇಕು. ಪರೀಕ್ಷೆ ಪ್ರಾರಂಭವಾದ ನಂತರ ಬರುವ ಅಭ್ಯರ್ಥಿಗೆ ಪರೀಕ್ಷಾ ಕೊಠಡಿಗೆ ಪ್ರವೇಶವಿರುವುದಿಲ್ಲ. ಪರೀಕ್ಷೆಗೆ ನಿಗದಿಪಡಿಸಿದ ಪೂರ್ಣ ಅವಧಿಯು ಮುಗಿಯುವವರೆಗೆ ಯಾವುದೇ ಅಭ್ಯರ್ಥಿಯು ಪರೀಕ್ಷಾ ಕೊಠಡಿಯಿಂದ ಹೊರ ಹೋಗುವಂತಿಲ್ಲ.
4. ಪ್ರಶ್ನೆ ಪತ್ರಿಕೆಯನ್ನು 05 ನಿಮಿಷಗಳ ಮುಂಚಿತವಾಗಿ ಅಭ್ಯರ್ಥಿಗಳಿಗೆ ನೀಡಲಾಗುವುದು. ಸದರಿ ಪ್ರಶ್ನೆ ಪತ್ರಿಕೆಯನ್ನು ಬೆಲ್ ನಂತರ ಸ್ಟಿಕ್ಕರ್ ತೆಗೆದು ಪ್ರಶ್ನೆಗಳಿಗೆ ಉತ್ತರಿಸಲು ಪ್ರಾರಂಭಿಸಬೇಕು.
5. ಪ್ರವೇಶ ಪತ್ರದ ಜೊತೆಗೆ ಕಪ್ಪು/ನೀಲಿ ಬಣ್ಣದ ಬಾಲ್ ಪಾಯಿಂಟ್ ಪೆನ್ನನ್ನು ತರಬೇಕು. ಓ.ಎಂ.ಆರ್ ಹಾಳೆಯಲ್ಲಿನ ಎಲ್ಲಾ ನಮೂದು (Marking) ಗಳನ್ನು ಬಾಲ್ ಪಾಯಿಂಟ್ ಪೆನ್ನಿನಿಂದ ಮಾತ್ರ ಮಾಡತಕ್ಕದ್ದು. ಬ್ಲೇಡ್, ರಬ್ಬರ್ ಅಥವಾ ಬಿಳಿದ್ರವ(ವೈಟ್ನರ್) ವನ್ನು ಉಪಯೋಗಿಸಿ ಯಾವುದೇ ತಿದ್ದುಪಡಿಯನ್ನು ಮಾಡಬಾರದು.
6. ಓ.ಎಂ.ಆರ್ ಉತ್ತರ ಹಾಳೆಯಲ್ಲಿ ಈ ಕೆಳಕಂಡಂತೆ ಕಡ್ಡಾಯವಾಗಿ ನಮೂದಿಸತಕ್ಕದ್ದು.

   (ಅ) ಅಭ್ಯರ್ಥಿಯ ನೋಂದಣಿ ಸಂಖ್ಯೆ (Register No.) (ಆ) ಪ್ರಶ್ನೆಪತ್ರಿಕೆ ಶ್ರೇಣಿ (Question paper version)
   (ಇ) ಓ.ಎಂ.ಆರ್. ಉತ್ತರ ಹಾಳೆ ಸಂಖ್ಯೆ (ಈ) ಪರೀಕ್ಷಾ ಕೇಂದ್ರದ ಕೋಡ್ (Center Code)
   (ಉ) ಪರೀಕ್ಷಾ ಉಪಕೇಂದ್ರದ ಕೋಡ್ (Sub-Center Code) (ಊ) ಪತ್ರಿಕೆಗನುಗುಣವಾಗಿ ಮಾಧ್ಯಮ

7. ಅಭ್ಯರ್ಥಿಗಳು ನಾಮಿನಲ್ ರೋಲ್‌ನಲ್ಲಿ ಮುದ್ರಿತವಾಗಿರುವ ತಮ್ಮ ಹೆಸರು, ಭಾವಚಿತ್ರ ಮತ್ತು ನೋಂದಣಿ ಸಂಖ್ಯೆಯನ್ನು ಖಚಿತಪಡಿಸಿಕೊಂಡ ನಂತರವೇ ಓ.ಎಂ.ಆರ್. ಉತ್ತರ ಹಾಳೆಯಲ್ಲಿ ತಮಗೆ ಹಂಚಿಕೆ ಮಾಡಿದ ಪ್ರಶ್ನೆಪತ್ರಿಕೆಯ ಶ್ರೇಣಿ ಮತ್ತು ಓ.ಎಂ.ಆರ್. ಉತ್ತರ ಹಾಳೆಯ ಸಂಖ್ಯೆಯನ್ನು ಬರೆದು ಅರ್ಜಿಯಲ್ಲಿರುವಂತೆ ಪೂರ್ಣ ಸಹಿ ಮಾಡಬೇಕು.
8. ಉತ್ತರಿಸಿದ ಓ.ಎಂ.ಆರ್. ಉತ್ತರ ಹಾಳೆಯನ್ನು ಸಂವೀಕ್ಷಕರಿಗೆ ಹಿಂದಿರುಗಿಸುವ ಮುನ್ನ ತಮ್ಮ Center code ನೋಂದಣಿ ಸಂಖ್ಯೆ, ಸಂಕೇತ ಸಂಖ್ಯೆ ಮತ್ತು ಪ್ರಶ್ನೆ ಪತ್ರಿಕೆ ಶ್ರೇಣಿ ನಮೂದಿಸಿರುವುದನ್ನು ಪರಿಶೀಲಿಸಿ ಸಂವೀಕ್ಷಕರು ಹಾಗೂ ಅಭ್ಯರ್ಥಿ ಸಹಿ ಮಾಡಿರುವುದನ್ನು ಖಚಿತಪಡಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ.
9. ಪ್ರಶ್ನೆ ಪುಸ್ತಿಕೆಯಲ್ಲಿನ ಪ್ರಶ್ನೆಗಳಲ್ಲಿ ಅಥವಾ ಉತ್ತರಗಳಲ್ಲಿ ಯಾವುದಾದರೂ ಲೋಪ ದೋಷಗಳು ಕಂಡು ಬಂದಲ್ಲಿ, ಆಯೋಗವು ಈ ಸ್ಪರ್ಧಾತ್ಮಕ ಪರೀಕ್ಷೆಗೆ ಸಂಬಂಧಿಸಿದಂತೆ ಕೀ-ಉತ್ತರಗಳನ್ನು ಆಯೋಗದ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ ನಂತರ ಆಕ್ಷೇಪಣೆಗಳನ್ನು ಸಲ್ಲಿಸಲು ಸೂಚಿಸಿದೆ.
10. ಪ್ರವೇಶ ಪಡೆದುಕೊಂಡ ಮಾತ್ರಕ್ಕೆ ಆಯೋಗವು ನಿಮ್ಮ ಅಭ್ಯರ್ಥಿತ್ವವನ್ನು ಒಪ್ಪಿಕೊಂಡಿದೆ ಎಂದು ಅರ್ಥವಲ್ಲ. ತಪ್ಪುಗಳು ಯಾವುದೇ ಹಂತದಲ್ಲಾದರೂ ಕಂಡು ಬಂದಲ್ಲಿ ನಿಮ್ಮ ಅಭ್ಯರ್ಥಿತ್ವವನ್ನು ರದ್ದು ಮಾಡುವ ಅಧಿಕಾರವನ್ನು ಆಯೋಗವು ಹೊಂದಿರುತ್ತದೆ.
11. ಪರೀಕ್ಷಾ ಸಮಯದಲ್ಲಿ ಅಭ್ಯರ್ಥಿಗಳಿಗೆ ನೀಡಲಾದ ಓ.ಎಂ.ಆರ್.ಉತ್ತರ ಪತ್ರಿಕೆ/ಉತ್ತರ ಪತ್ರಿಕೆ/ ಪ್ರಶ್ನೆ ಪತ್ರಿಕೆಗಳಲ್ಲಿನ ಸೂಚನೆಗಳನ್ನು ಕಡ್ಡಾಯವಾಗಿ ಓದಿಕೊಂಡು ಅವುಗಳನ್ನು ಪಾಲಿಸತಕ್ಕದ್ದು.

18. <u>ಆಯೋಗದೊಡನೆ ಪತ್ರ ವ್ಯವಹಾರ:</u>

ಆಯೋಗವು ಅಭ್ಯರ್ಥಿತ್ವದ ವಿಚಾರದಲ್ಲಿ ಅಭ್ಯರ್ಥಿಗಳೊಂದಿಗೆ ಯಾವುದೇ ಪತ್ರ ವ್ಯವಹಾರವನ್ನು ನಡೆಸುವುದಿಲ್ಲ. ಆದಾಗ್ಯೂ ಪರೀಕ್ಷೆಗಾಗಿ ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳುವಲ್ಲಿ ಸಮಸ್ಯೆ ಉಂಟಾದಲ್ಲಿ, ಸಹಾಯವಾಣಿ (HELP LINE) ಮತ್ತು ಸಂಪರ್ಕಿಸತಕ್ಕದ್ದು. ಅಭ್ಯರ್ಥಿಯು ಮಾಹಿತಿಗಾಗಿ ಸಂಪರ್ಕಿಸುವ ಸಮಯದಲ್ಲಿ ಈ ಹುದ್ದೆಗಳಿಗೆ ಸಲ್ಲಿಸಿದ ಅರ್ಜಿಯ ಕ್ರಮಸಂಖ್ಯೆ, ಜನ್ಮ ದಿನಾಂಕ, ಕೋರಿದ ಪರೀಕ್ಷಾ ಕೇಂದ್ರ ಇತ್ಯಾದಿ ವಿವರಗಳನ್ನು ನೀಡತಕ್ಕದ್ದು.

19. <u>ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆಗಳು:</u>

| | | |
|---|---|---|
| ಸಹಾಯವಾಣಿ | : | On-line ಮೂಲಕ ಅರ್ಜಿಯನ್ನು ಭರ್ತಿಮಾಡುವ ಸಂದರ್ಭದಲ್ಲಿ ಯಾವುದಾದರೂ ತಾಂತ್ರಿಕ ತೊಂದರೆ ಅಥವಾ ಸಮಸ್ಯೆ ಎದುರಾದಲ್ಲಿ ಸಹಾಯವಾಣಿ (Help line) No. 7815930293, 7815930294, 7815930296 ಮತ್ತು 7815930292 ಮೂಲಕ ಸಂಪರ್ಕಿಸಿ ಅಗತ್ಯ ಮಾಹಿತಿ ಪಡೆದು ಅರ್ಜಿ ಸಲ್ಲಿಸಬಹುದು. |

20. <u>ದುರ್ನಡತೆ :</u>

ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಹೊಂದಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆ ಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ಪರೀಕ್ಷೆಯಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಪರೀಕ್ಷಾ ಕೊಠಡಿಯಲ್ಲಿ ದುರ್ವರ್ತಿಸುತ್ತಿರುವನೆಂಬ ಬಗ್ಗೆ ತಪ್ಪಿತಸ್ಥನೆಂದು ಕಂಡುಬಂದಲ್ಲಿ ಹಾಗೂ ಆಯೋಗದಿಂದ ನೀಡಲಾದ ಯಾವುದೇ ಸೂಚನೆಗಳನ್ನು ಉಲ್ಲಂಘಿಸುತ್ತಿರುವನೆಂದು ಅಥವಾ ಅವನು ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು, ಕಂಡುಬಂದಲ್ಲಿ ಅಭ್ಯರ್ಥಿಯು ಸ್ವತ: ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ; ಆಯೋಗವು ನಡೆಸುವ ಯಾವುದೇ ಪರೀಕ್ಷೆಗೆ ಪ್ರವೇಶ ಪಡೆಯುವುದರಿಂದ ಅಥವಾ ಯಾವುದೇ ಹುದ್ದೆಯ ಆಯ್ಕೆಗೆ ಖಾಯಂ ಆಗಿ ಡಿಬಾರ್ ಮಾಡಲಾಗುವುದು. ಈ ಬಗ್ಗೆ ಆಯೋಗದ ತೀರ್ಮಾನವೆ ಅಂತಿಮವಾಗಿರುತ್ತದೆ.

(ಎನ್.ಎಸ್. ಪ್ರಸನ್ನ ಕುಮಾರ್)
ಕಾರ್ಯದರ್ಶಿ,
ಕರ್ನಾಟಕ ಲೋಕಸೇವಾ ಆಯೋಗ.

# ಅನುಬಂಧ-1

(ಅ) ಅಬಕಾರಿ ಉಪನಿರೀಕ್ಷಕರು-177 ಹುದ್ದೆಗಳ ವರ್ಗೀಕರಣ:

ಉಳಿದ ಮೂಲ ವೃಂದದ (145 ಹುದ್ದೆಗಳು)

| ಮೀಸಲಾತಿ | ಇತರೆ | ಮಹಿಳೆ | ಗ್ರಾಮೀಣ | ಮಾ.ಸೈ. | ಕ.ಮಾ.ಅ | ಯೋ.ಅ | ಒಟ್ಟು. |
|---|---|---|---|---|---|---|---|
| ಪ.ಜಾ. | 07 | 06 | 05 | 02 | 02 | – | **22** |
| ಪ.ಪಂ. | 01 | 02 | 02 | – | – | – | **05** |
| ಪ್ರವರ್ಗ-1 | 04 | 02 | 02 | – | – | – | **08** |
| ಪ್ರವರ್ಗ-2(ಎ) | 08 | 07 | 05 | 03 | 01 | – | **24** |
| ಪ್ರವರ್ಗ-2(ಬಿ) | 03 | 03 | 02 | – | – | – | **08** |
| ಪ್ರವರ್ಗ-3(ಎ) | 02 | 01 | 02 | – | – | – | **05** |
| ಪ್ರವರ್ಗ-3(ಬಿ) | 04 | 02 | 02 | – | – | – | **08** |
| ಸಾ.ಅ. | 16 | 18 | 20 | 05 | 03 | 03 | **65** |
| ಒಟ್ಟು | **45** | **41** | **40** | **10** | **06** | **03** | **145** |

ಹೈದರಾಬಾದ್ ಕರ್ನಾಟಕ ಸ್ಥಳೀಯ ವೃಂದದ (32 ಹುದ್ದೆಗಳು)

| ಮೀಸಲಾತಿ | ಇತರೆ | ಮಹಿಳೆ | ಗ್ರಾಮೀಣ | ಮಾ.ಸೈ. | ಯೋ.ಅ | ಒಟ್ಟು. |
|---|---|---|---|---|---|---|
| ಪ.ಜಾ. | 01 | 02 | 02 | – | – | **05** |
| ಪ.ಪಂ. | 01 | – | – | – | – | **01** |
| ಪ್ರವರ್ಗ-2(ಎ) | – | 03 | 01 | – | – | **04** |
| ಪ್ರವರ್ಗ-3(ಎ) | 01 | 01 | – | – | – | **02** |
| ಪ್ರವರ್ಗ-3(ಬಿ) | – | 01 | – | – | – | **01** |
| ಸಾ.ಅ. | 06 | 08 | 02 | 02 | 01 | **19** |
| ಒಟ್ಟು | **09** | **15** | **05** | **02** | **01** | **32** |

<u>**ಅನುಬಂಧ–2**</u>

<u>**ಅಬಕಾರಿ ರಕ್ಷಕರ (ಪುರುಷ) ನೇರ ನೇಮಕಾತಿ:–ಹುದ್ದೆಗಳ ವರ್ಗೀಕರಣ**</u>

| ಕ್ರ.ಸ | ಜಿಲ್ಲೆಯ ಹೆಸರು | ಹುದ್ದೆಗಳ ಸಂಖ್ಯೆ | ಮೀಸಲಾತಿ | ಇತರೆ | ಗ್ರಾಮೀಣ | ಮಾ.ಸೈ | ಕ.ಮಾ.ಅ | ಯೋ.ಅ | ಒಟ್ಟು |
|---|---|---|---|---|---|---|---|---|---|
| **1** | ಬೆಂಗಳೂರು ನಗರ (ಉತ್ತರ) | **282** | ಪ.ಜಾ | 24 | 10 | 4 | 2 | 2 | **42** |
| | | | ಪ.ಪಂ | 4 | 3 | 1 | 1 | – | **9** |
| | | | ಪ್ರ–1 | 5 | 3 | 1 | 1 | 1 | **11** |
| | | | ಪ್ರ–2ಎ | 24 | 10 | 4 | 2 | 2 | **42** |
| | | | ಪ್ರ–2ಬಿ | 5 | 3 | 1 | 1 | 1 | **11** |
| | | | ಪ್ರ–3ಎ | 6 | 3 | 1 | 1 | 1 | **12** |
| | | | ಪ್ರ–3ಬಿ | 7 | 3 | 2 | 1 | 1 | **14** |
| | | | ಸಾ.ಅ | 78 | 35 | 14 | 7 | 7 | **141** |
| | | | ಒಟ್ಟು | **153** | **70** | **28** | **16** | **15** | **282** |

| ಕ್ರ.ಸ | ಜಿಲ್ಲೆಯ ಹೆಸರು | ಹುದ್ದೆಗಳ ಸಂಖ್ಯೆ | ಮೀಸಲಾತಿ | ಇತರೆ | ಗ್ರಾಮೀಣ | ಮಾ.ಸೈ | ಕ.ಮಾ.ಅ | ಯೋ.ಅ | ಒಟ್ಟು |
|---|---|---|---|---|---|---|---|---|---|
| **2** | ಬೆಂಗಳೂರು ಗ್ರಾಮಾಂತರ | **52** | ಪ.ಜಾ | 4 | 2 | 1 | – | – | **7** |
| | | | ಪ.ಪಂ | 1 | 1 | – | – | – | **2** |
| | | | ಪ್ರ–1 | 2 | 1 | – | – | – | **3** |
| | | | ಪ್ರ–2ಎ | 5 | 2 | 1 | – | – | **8** |
| | | | ಪ್ರ–2ಬಿ | 1 | 1 | – | – | – | **2** |
| | | | ಪ್ರ–3ಎ | 1 | 1 | – | – | – | **2** |
| | | | ಪ್ರ–3ಬಿ | 1 | 1 | – | – | – | **2** |
| | | | ಸಾ.ಅ | 14 | 6 | 3 | 1 | 2 | **26** |
| | | | ಒಟ್ಟು | **29** | **15** | **5** | **1** | **2** | **52** |

| ಕ್ರ.ಸ | ಜಿಲ್ಲೆಯ ಹೆಸರು | ಹುದ್ದೆಗಳ ಸಂಖ್ಯೆ | ಮೀಸಲಾತಿ | ಇತರೆ | ಗ್ರಾಮೀಣ | ಮಾ.ಸೈ | ಕ.ಮಾ.ಅ | ಯೋ.ಅ | ಒಟ್ಟು |
|---|---|---|---|---|---|---|---|---|---|
| **3** | ಬಾಗಲಕೋಟೆ | **26** | ಪ.ಜಾ | 2 | 2 | – | – | – | **4** |
| | | | ಪ.ಪಂ | 1 | – | – | – | – | **1** |
| | | | ಪ್ರ–1 | 1 | – | – | – | – | **1** |
| | | | ಪ್ರ–2ಎ | 2 | 2 | – | – | – | **4** |
| | | | ಪ್ರ–2ಬಿ | 1 | – | – | – | – | **1** |
| | | | ಪ್ರ–3ಎ | 1 | – | – | – | – | **1** |
| | | | ಪ್ರ–3ಬಿ | 1 | – | – | – | – | **1** |
| | | | ಸಾ.ಅ | 6 | 3 | 2 | 1 | 1 | **13** |
| | | | ಒಟ್ಟು | **15** | **7** | **2** | **1** | **1** | **26** |

| ಕ್ರ.ಸ | ಜಿಲ್ಲೆಯ ಹೆಸರು | ಹುದ್ದೆಗಳ ಸಂಖ್ಯೆ | ಮೀಸಲಾತಿ | ಇತರೆ | ಗ್ರಾಮೀಣ | ಮಾ.ಸೈ | ಕ.ಮಾ.ಅ | ಯೋ.ಅ | ಒಟ್ಟು |
|---|---|---|---|---|---|---|---|---|---|
| 4 | ಬೆಳಗಾವಿ | 52 | ಪ.ಜಾ | 4 | 2 | 1 | 1 | – | **8** |
| | | | ಪ.ಪಂ | 1 | 1 | – | – | – | **2** |
| | | | ಪ್ರ–1 | 1 | 1 | – | – | – | **2** |
| | | | ಪ್ರ–2ಎ | 3 | 2 | 1 | 1 | – | **7** |
| | | | ಪ್ರ–2ಬಿ | 1 | 1 | – | – | – | **2** |
| | | | ಪ್ರ–3ಎ | 1 | 1 | – | – | – | **2** |
| | | | ಪ್ರ–3ಬಿ | 2 | 1 | – | – | – | **3** |
| | | | ಸಾ.ಅ | 15 | 6 | 3 | 1 | 1 | **26** |
| | | | ಒಟ್ಟು | **28** | **15** | **5** | **3** | **1** | **52** |

| ಕ್ರ.ಸ | ಜಿಲ್ಲೆಯ ಹೆಸರು | ಹುದ್ದೆಗಳ ಸಂಖ್ಯೆ | ಮೀಸಲಾತಿ | ಇತರೆ | ಗ್ರಾಮೀಣ | ಒಟ್ಟು |
|---|---|---|---|---|---|---|
| 5 | ಬಳ್ಳಾರಿ | 11 | ಪ.ಜಾ | 1 | 1 | **2** |
| | | | ಪ.ಪಂ | 1 | – | **1** |
| | | | ಪ್ರ–1 | 1 | – | **1** |
| | | | ಪ್ರ–2ಎ | 1 | – | **1** |
| | | | ಪ್ರ–2ಬಿ | 1 | – | **1** |
| | | | ಪ್ರ–3ಎ | 1 | – | **1** |
| | | | ಸಾ.ಅ | 2 | 2 | **4** |
| | | | ಒಟ್ಟು | **8** | **3** | **11** |

| ಕ್ರ.ಸ | ಜಿಲ್ಲೆಯ ಹೆಸರು | ಹುದ್ದೆಗಳ ಸಂಖ್ಯೆ | ಮೀಸಲಾತಿ | ಇತರೆ | ಗ್ರಾಮೀಣ | ಒಟ್ಟು |
|---|---|---|---|---|---|---|
| 6 | ಬೀದರ್ | 9 | ಪ.ಜಾ | – | 1 | **1** |
| | | | ಪ್ರ–1 | 1 | – | **1** |
| | | | ಪ್ರ–2ಎ | 1 | – | **1** |
| | | | ಪ್ರ–2ಬಿ | 1 | – | **1** |
| | | | ಸಾ.ಅ | 4 | 1 | **5** |
| | | | ಒಟ್ಟು | **7** | **2** | **9** |

| ಕ್ರ.ಸ | ಜಿಲ್ಲೆಯ ಹೆಸರು | ಹುದ್ದೆಗಳ ಸಂಖ್ಯೆ | ಮೀಸಲಾತಿ | ಇತರೆ | ಗ್ರಾಮೀಣ | ಒಟ್ಟು |
|---|---|---|---|---|---|---|
| 7 | ವಿಜಯಪುರ | 12 | ಪ.ಜಾ | 1 | 1 | **2** |
| | | | ಪ್ರ–2ಎ | 2 | – | **2** |
| | | | ಪ್ರ–2ಬಿ | 1 | – | **1** |
| | | | ಪ್ರ–3ಎ | 1 | – | **1** |
| | | | ಸಾ.ಅ | 4 | 2 | **6** |
| | | | ಒಟ್ಟು | **9** | **3** | **12** |

| ಕ್ರ.ಸ | ಜಿಲ್ಲೆಯ ಹೆಸರು | ಹುದ್ದೆಗಳ ಸಂಖ್ಯೆ | ಮೀಸಲಾತಿ | ಇತರೆ | ಗ್ರಾಮೀಣ | ಮಾ.ಸೈ | ಒಟ್ಟು |
|---|---|---|---|---|---|---|---|
| 8 | ಚಾಮರಾಜನಗರ | 16 | ಪ.ಜಾ | 1 | 1 | – | **2** |
| | | | ಪ್ರ–2ಎ | 2 | 1 | – | **3** |
| | | | ಪ್ರ–2ಬಿ | 1 | – | – | **1** |
| | | | ಪ್ರ–3ಎ | 1 | – | – | **1** |
| | | | ಪ್ರ–3ಬಿ | 1 | – | – | **1** |
| | | | ಸಾ.ಅ | 4 | 3 | 1 | **8** |
| | | | ಒಟ್ಟು | **10** | **5** | **1** | **16** |

| ಕ್ರ.ಸ | ಜಿಲ್ಲೆಯ ಹೆಸರು | ಹುದ್ದೆಗಳ ಸಂಖ್ಯೆ | ಮೀಸಲಾತಿ | ಇತರೆ | ಗ್ರಾಮೀಣ | ಮಾ.ಸೈ | ಕ.ಮಾ.ಅ | ಯೋ.ಅ | ಒಟ್ಟು |
|---|---|---|---|---|---|---|---|---|---|
